ಕೆಲವು ದಿನ ಊರಿಗೆ ಸೇರಿದಂಗಿರೊ ಗುಡ್ಡದ ಮಟ್ಟಿಲಿರೋ ಮಲ್ಲಪ್ಪನ ಗುಡಿಗೋಗಿ ಮಲಗಿದ. ಅಲ್ಲಿ ಮಲಗಿದರು ಸಮಾಧಾನ ಇಲ್ಲ. ಎಲ್ಲಿ ಮಲಗಿದರು ಸಮಾಧಾನ ಇಲ್ಲ. ಮನದ ಕಾಡಿಗೆ ಕಾಡ್ಗಿಚ್ಚು ಬಿದ್ದದೆ. ತಳಸರಿಸಿ ಬೆಂಕಿ ಒತ್ತರಿಸಿಕೋತ ಹೊಂಟದೆ.

ಕೊನೆಗೊಂದು ತೀರ್ಮಾನಕೆ ಬಂದೆ. ಊರಿಗೆ ಬಂದರು ಮನೆಗೆ ಹೋಗಿರಲಿಲ್ಲ. ಮನೆಗೋಗಾಕೆ ಮನಸು ಬರಲಿಲ್ಲ. ಉಣ್ಣೋದು ತಿನ್ನೋದು ಮಲಗೋದು ಕಷ್ಟ ಆದರು ಮನೆ ನೆನಿಸಿಕೊಂಡರಲಿಲ್ಲ. ಈಗ ಅಣ್ಣ ಅಣ್ಣನ ಮಕ್ಕಳು ಹೊಡೆದು ಹಾಕೋಕೆ ನೋಡವರೆ. ನಾನು ಊರುಬಿಟ್ಟು ಹೋಗೋ ಮೊದಲು ಅಣ್ಣ ನನ್ನ ಒದೆಯಾಕೆ ಕಾಲೆತ್ತಿದ್ದು ಇನ್ನು ಕಣ್ಣಾಗೆ ಇದೆ. ಇನ್ನು ನಾನು ಸುಮ್ಮನೆ ಇರಬಾರದು. ಆಸ್ತಿ ಪಾಸ್ತಿ ಮನೆಮಾರು ಯಾವುದು ಬೇಡ ಅಂತಲೆ ಇದ್ದವ ನಾನು. ಈಗಿನ ಇವರ ಕಾಟಕೆ ಹೆದರೋದ? ಹೆದರಬಾರದು. ಇಂತೋರಿಗೆ ಬಿಡಬಾರದು. ಸರಿಯಾಗಿ ಬುದ್ಧಿಕಲಿಸಬೇಕು ಅನಿಸ್ತು. ಉಲ್ಟ ಹೊಡೆದು ನಿಂತೆ. ಮರುದಿನ ಅಣ್ಣ ಎದರು ಬರೋದು ನೋಡಿ ಎದುರಿಗೆ ಹೋಗಿ,



"ನೋಡು ಅಣ್ಣ ನಿನ್ನ ತಮ್ಮ ಶಾಂತಪ್ಪ ನಾನು. ಸುತ್ತು ಬಳಸಿ ಮಾತ್ಯಾಕೆ. ನನ್ನ ಪಾಲಿನ ಆಸ್ತಿ ನನಗೆ ಕೊಡು" ಅಂದೆ. ಇದ ಕೇಳಿ ಮೈಮೇಲೆ ಬಿದ್ದ ಹುಲ್ಲು ಮೆದೆಗೆ ಬೆಂಕಿ ಬಿದ್ದಂಗೆ ತಣೆ ಪಿಣೆ ಹಾರಾಡಿದ.

"ನೀನ್ಯಾವ ತಮ್ಮನೋ ನೀನು? ನನ ತಮ್ಮ ಇಪ್ಪತ್ತು ವರ್ಷದೀಲೆ ತೀರೋಗವ್ನೆ. ಈಗೆಲ್ಲಿ ಬಂದಾನು ಹೊಗು ಹೋಗೊ. ನಾ ಅವ್ನಿಗೆ ಕೊಡೋದು ಏನೂಯಿಲ್ಲ. ಒಂದು ಕಿಗ್ಗಲು ಕಾಸು ಸಿಗೊಲ್ಲ. ಹೋಗು ಹೋಗು ಎಲ್ಲಿದ್ದೆ ಅಲ್ಲೇ ಇರೋಗು. ಇಲ್ಯಾಕೆ ಬಂದೆ?" ಅಂದ.

"ನೀನು ಕೊಡ್ತಿಯೋ ನಾನು ಪೊಲೀಸ್ ಕಂಪ್ಲೇಂಟ್ ಕೊಡಲೋ."

"ಕಂಪ್ಲೇಂಟ್ ಆದರೂ ಕೊಡು, ಕೋರ್ಟಿಗೆ ಬೇಕಾದರೂ ಹೋಗು. ನಾ ನಿನಿಗೆ ಬಿಡಿ ಕಾಸು ಕೊಡಲ್ಲ. ನೀನೇನು ಮಾಡ್ತಿಯೋ ಮಾಡ್ಕೊ ಹೋಗು" ಅಂದು ದಡ ದಡ ಹೋದ.

ಶಾಂತಪ್ಪ ಪೊಲೀಸ್ ಸ್ಟೇಷನ್‌ಗೆ ಹೋಗಿ ಕಂಪ್ಲೇಂಟ್ ಕೊಟ್ಟ. ಪೊಲೀಸರು ಬಂದು ಶಾಂತಪ್ಪ ಅವರ ಅಣ್ಣ ಎಲ್ಲರನ್ನು ವಿಚಾರಿಸಿದರು.

ಹತ್ತು ದಿನ ಕಳೆಯೊ ಹೊತ್ತಿಗೆ 'ಸುತ್ತಿನ ನಾಲ್ಕೂರು ಯಜಮಾನರನ್ನು ಕರದು ಸೇರುಸ್ತೇನಿ ಭಾನುವಾರ ಸ್ಕೂಲತ್ರ. ಬಂದು ಪಾಲಿನ ತೀರ್ಮಾನ ಮಾಡಿಕೊಡು' ಅಂತ ಅಂದ ಶಾಂತಪ್ಪ ಅವರ ಅಣ್ಣನ ಹತ್ತಿರ. ಅಷ್ಟೊತ್ತಿಗೆ ಅಣ್ಣ ಶೇಕದಾರರು, ತಾಲ್ಲೂಕು ಆಫೀಸು, ಲಾಯರ್ರು ಯಾರ್‍ಯಾರ ಹತ್ರಾನು ಇಂಗ್ಲಿಸಿ ಬಿಡಿ ಬಿಡಿಸಿ ಮಾತನಾಡಿದ್ದ. ಯಾರಾದರು 'ಅಣ್ಣ ತಮ್ಮ ಅಂದಮ್ಯಾಗೆ ಅವನ ಆಸ್ತಿ ಅವ್ನಿಗೆ ಕೊಡಬೇಕು. ಇಲ್ಲಂದ್ರೆ ತೊಂದರೆ' ಅಂದವರೆ.

ಅದೊಂದಿನ ಗುಡಿಗೆ ಎಡೆ ತಂಗಂದು ಹೋಗ್ತಾಯಿರೊ ಅತ್ತಿಗೆಮ್ಮನ ನೋಡಿ, ಅವರು ಒಂದು ಸುತ್ತು ಗುಡಿ ಸುತ್ತ ಪ್ರದಕ್ಷಣೆ ಬರೋ ಹೊತ್ತಿಗೆ ಎದುರಿಗೆ ಹೋಗಿ ಶಾಂತಪ್ಪ ಕಾಲಿಗೆ ನಮಸ್ಕಾರ ಮಾಡಾಕೆ ನೋಡಿದ. ಗಾಬರಿಯಿಂದ ಸರಕ್ಕನೆ ಹಿಂದಕ್ಕೆ ಸರಿದು,

"ಅಯ್ಯಯ್ಯೊ, ಅದೆಲ್ಲ ಬೇಡಪ್ಪ. ನನಗಿಂಥ ದೊಡ್ಡೋರು ನೀವು. ನೀವು ಹೀಗೆ ಮಾಡಬಾರದು. ಅದ್ಯಾಕಪ್ಪ ಮನಿಗೆ ಬರಲಿಲ್ಲ? ಬರಬೇಕಿತ್ತು. ಬರಬೇಕಿತ್ತು ಓ..." ಅನುತ ಸೆರಗು ಬಾಯಿಗಿಟ್ಟು ಗುಡಿ ಒಳ ಹೋದರು.

ಸ್ಕೂಲ್ ಮನೇಲಿ ಪಂಚಾಯಿತಿಗೆ ನಾಕೂರು ಹಿರೀಕರು ಸೇರಿದರು. ಶಾಂತಪ್ಪನೆ ಚಾ ಉಪ್ಪಿಟ್ಟು ಸೇರಿದೋರಿಗೆಲ್ಲ ಮಾಡಿಸಿದ್ದ. ಯಜಮಾನರು ಕೇಳಿದರು. ಅಣ್ಣ ಮೊದ ಮೊದಲು ಏನು ಕೊಡಲ್ಲ